ಒ.ಎಸ್.ನಂ:66/2018
ಡಿ.ಡಬ್ಲೂ.1

**ದಿ:06.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ವಾದಿ ಪರ ಶ್ರೀ.**E.S.I.,** ವಕೀಲರಿಂದ:-

ನಾನು ಎಸ್ಎಸ್ಎಲ್ಸಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ ಪ್ರಸ್ತುತ ಶಿಕ್ಷಣ ಇಲಾಖೆಯಲ್ಲಿ ಜಿಲ್ಲಾ ತರಬೇತಿ ಸಂಸ್ಥೆ, ಚಿತ್ರದುರ್ಗದಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದೇನೆ . ನಾನು ದ್ವಿತೀಯ ದರ್ಜೆ ಸಹಾಯಕರಾಗಿ ಸನ್ 2010 ರಲ್ಲಿ ಕರ್ತವ್ಯಕ್ಕೆ ಸೇರಿಕೊಂಡಿರುತ್ತೇನೆ . ಸದರಿ ಕೆಲಸ ನನಗೆ ನನ್ನ ಗಂಡ ಬಸವರಾಜ್ ಅವರ ಮರಣಾ ನಂತರ ಪರಿಹಾರವಾಗಿ ಶಿಕ್ಷಣ ಇಲಾಖೆಯಿಂದ ಸಿಕ್ಕಿರುತ್ತದೆ . ವಾದಿ 1 ರತ್ನಮ್ಮ ಅವರು ನನ್ನ ಅತ್ತೆ , ವಾದಿ 2 ನನ್ನ ನಾದಿನಿ ಆಗಬೇಕು ಎಂದರೆ ಸರಿ. ವಾದಿ 1 ರತ್ನಮ್ಮ ಅವರಿಗೆ ವಾದಿ 2 ಸುಧಾ , ನಾಗರಾಜ್ ಮತ್ತು ನನ್ನ ಗಂಡ ಬಸವರಾಜ್ ರವರು ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ನಾಗರಾಜ್ ಅವರು ಮದುವೆ ಪೂರ್ವದಲ್ಲಿ ಮರಣಹೊಂದಿರುತ್ತಾರೆ . ನಮ್ಮ ಮಾವ ವಾದಿ 1 ರತ್ನಮ್ಮ ಅವರ ಗಂಡನನ್ನು ಗೌಡರ ಮಲ್ಲಿಕಾರ್ಜುನಪ್ಪ ಎಂದು ಕರೆಯುತ್ತಾರೆ ಎಂದರೆ ಸರಿ. ಸದರಿ ಗೌಡರ ಮಲ್ಲಿಕಾರ್ಜುನಪ್ಪ ಅವರ ತಂದೆ ಹೆಸರು ಗೌಡರ ನಿಂಗಪ್ಪ ಇರುತ್ತದೆ ಎಂದರೆ ಸರಿ. ಸದರಿ ನಿಂಗಪ್ಪರವರಿಗೆ 2 ಹೆಂಡತಿಯರು ಇರುತ್ತಾರೆ , ಮೊದಲ ಹೆಂಡತಿ ಹೆಸರು ಮಹಾದೇವಮ್ಮ , ಎರಡನೇ ಹೆಂಡತಿ ಹೆಸರು ಬಸಮ್ಮ ಇರುತ್ತಾರೆ ಎಂದರೆ ಸರಿ.

2. ನನ್ನ ಮತ್ತು ಬಸವರಾಜ್ ಅವರ ನಡುವೆ ದಿ: 09.12.2001 ರಲ್ಲಿ ಮದುವೆ ಆಗಿರುತ್ತದೆ ಎಂದರೆ ಸರಿ. ನನ್ನ ಗಂಡ ಬಸವರಾಜ್ ಅವರು ದಿ: 25.05.2009 ರಲ್ಲಿ ಮರಣಹೊಂದಿರುತ್ತಾರೆ . ನನ್ನ ಗಂಡ ಬಸವರಾಜ್ ಅವರು ಅಪಘಾತದಲ್ಲಿ ಮರಣಹೊಂದಿರುತ್ತಾರೆ . ನನಗೆ ಅನುಕಂಪದ ಆಧಾರದ ಮೇಲೆ ನನ್ನ ಗಂಡನ ಕೆಲಸ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ 84/3 ಆಸ್ತಿಯ 4 ಎಕರೆ 25 ಗುಂಟೆ ನಮ್ಮ ಕೂಡು ಕುಟುಂಬದ ಆಸ್ತಿ ಇರುತ್ತದೆ. ಯಾವ ದಾಖಲೆ ಆಧಾರದ ಮೇಲೆ ಸರ್ವೆ ನಂಬರ್ 84/3 ನಮ್ಮ ಕೂಡು ಕುಟುಂಬದ ಆಸ್ತಿ ಎಂದು ತಿಳಿಸಿರುತ್ತೀರಿ ಎಂದರೆ ಸಾಕ್ಷಿ ವಾದಿ ರತ್ನಮ್ಮ ಅವರು ತಿಳಿಸಿರುತ್ತಾರೆ ಎಂದು ಹೇಳುತ್ತಾರೆ . ಈ ವಿಷಯವನನ್ನು ನನ್ನ ತಕರಾರಿನಲ್ಲಿ ತಿಳಿಸಿರುವುದಿಲ್ಲ ಎಂದರೆ

ಸರಿಯಲ್ಲ. ನಾನು ನಮ್ಮ ತಕರಾರಿನಲ್ಲಿ ಈ ವಿಷಯವನ್ನು ತಿಳಿಸದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 84/3 , 4 ಎಕರೆ 25 ಗುಂಟೆ ಆಸ್ತಿಯನ್ನು ನಮ್ಮ ಅತ್ತೆ ವಾದಿ ರತ್ನಮ್ಮ ಅವರು ಹಿಂದೆ ಸಿರಿಗೆರೆ ಮಠದ ಸ್ವಾಮಿ ಅವರಿಂದ ನಿಪಿ 4 ರಂತೆ ಸ್ವಯಾರ್ಜಿತವಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಮಾವ ಮಲ್ಲಿಕಾರ್ಜುನಪ್ಪ ಅವರು ವಾದಿ ರತ್ನಮ್ಮ ಅವರ ಹೆಸರಿಗೆ ಮಾಡಿಸಿರುತ್ತಾರೆ ಎಂದು ಹೇಳುತ್ತಾರೆ . ನಮ್ಮಮಾವ ಮಲ್ಲಿಕಾರ್ಜುನಪ್ಪ ಅವರು ವಾದಿ ರತ್ನಮ್ಮ ಅವರ ಹೆಸರಿಗೆ ಮಾಡಿಸಿಕೊಟ್ಟ ಬಗ್ಗೆ ದಾಖಲೆಗಳನ್ನು ನೋಡಿರುತ್ತೀರ ಎಂದರೆ ಸಾಕ್ಷಿ ಅವು ನಾವು ಮನೆ ಬದಲಾವಣೆ ಮಾಡಿದಾಗ ಕಳೆದುಹೋಗಿರುತ್ತಾವೆ ಎಂದು ಹೇಳುತ್ತಾರೆ . ಯಾವ ಯಾವ ದಾಖಲೆಗಳು ಕಳೆದುಹೋಗಿರುತ್ತಾವೆ ಎಂದರೆ ನನಗೆ ನೆನಪಿರುವುದಿಲ್ಲ . ಈ ದಾವೆಯಲ್ಲಿ ನಾನು ವಾದಿ ರತ್ನಮ್ಮ ಅವರು ಯಾವ ದಾಖಲೆಗಳನ್ನು ಸಲ್ಲಿಸಿರುವ ಬಗ್ಗೆ ನಮ್ಮ ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ . ಸಾಕ್ಷಿಗೆ ಈಗ ನಿಪಿ 4 ಕ್ರಯಪತ್ರ ತೋರಿಸಿ ವಾದಿ ರತ್ನಮ್ಮ ಅವರು ಸರ್ವೆ ನಂಬರ್ 84/3 ಆಸ್ತಿಯನ್ನು ಖರೀದಿ ಮಾಡಿರುವ ಪತ್ರ ಇರುತ್ತದೆ ಎಂದರೆ ಸಾಕ್ಷಿ ನಿಪಿ 4 ದಾಖಲೆಯು ಸೃಷ್ಠಿ ಮಾಡಿದ ದಾಖಲೆ ಇರುತ್ತದೆ ಎಂದು ಹೇಳುತ್ತಾರೆ . ನಿಪಿ 4 ದಾಖಲೆಯು ಸೃಷ್ಠಿ ಮಾಡಿದ ದಾಖಲೆ ಎಂದು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು**,** ಜಗಳೂರು